ಬಾಲ್ಕಿ ಪಟ್ಟಣದಲ್ಲಿರುವ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ

746(1086) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ):ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲ್ಕಿ ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆಯ ಕಟ್ಟಡದ ಕೆಲಸ ಎಂದಿನಿಂದ ಪ್ರಾರಂಭವಾಗುತ್ತದೆ ಮತ್ತು ಎಂದು ಪೂರ್ಣಗೊಳಿಸಲಾಗುವುದು;

ಆ) ಪ್ರಾಥಮಿಕ ಆರೋಗ್ಯ ಘಟಕದಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಬಾಲ್ಕಿ ತಾಲ್ಲೂಕಿನ ಯಾವ ಯಾವ ಪಿ.ಹೆಚ್.ಯು. ಇಂದ ಪಿ.ಹೆಚ್.ಸಿ. ಗೆ ಮೇಲ್ದರ್ಜೆಗೇರಿಸಲಾಗುತ್ತದೆ; ಪೂರ್ಣ ವಿವರಗಳನ್ನು ಒದಗಿಸುವುದು?

ಡಾ॥ಎ.ಬಿ.ಮಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಾಲ್ಕಿಯಲ್ಲಿಹಾಲಿ ಇರುವ 30 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ತಯಾರಿಸಿರುವ ನಕ್ಷೆ ಹಾಗೂ ಅಂದಾಜುಗಳನ್ನು ಜರ್ಮನಿಯ ಕೆ ಎಫ್ ಡಬ್ಲ್ಯೂ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ದಿನಾಂಕ: 24-2-2001 ರಂದು ಕಳುಹಿಸಿದೆ. ಅನುಮೋದನೆ ದೊರೆತ ನಂತರ ಗುತ್ತಿಗೆ ಕರೆದು ಕಾಮಗಾರಿಯನ್ನು ಗುತ್ತಿಗೆ ನೀಡಿದ ದಿನಾಂಕದಿಂದ 18 ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣಾ ವೆಚ್ಚ

747 (1089) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೀದರ್ ಜಿಲ್ಲಾ ಪಂಚಾಯತ್‌ಗೆ ಒಳಪಡುವ ರಸ್ತೆಗಳಿಗೆ ನಿರ್ವಹಣಾ ವೆಚ್ಚ(ಮೆಂಟೀನೆನ್ಸ್ ಬಜೆಟ್) ಇದೆಯೆ?

2) ಇದ್ದಲ್ಲಿ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಯಾವ ಯಾವ ರಸ್ತೆಗಳಿಗೆ ಎಷ್ಟು ಖರ್ಚಾಗಿದೆ? (ರಸ್ತೆವಾರು ವಿವರ ನೀಡುವುದು)

3) ಭಾಲ್ಕಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಜಿಲ್ಲಾ ಪಂಚಾಯತ್‌ನ ಎಷ್ಟು ರಸ್ತೆಗಳಲ್ಲಿ ಗುಂಡಿ ಬಿದ್ದು ಹಾಳಾಗಿದೆ 4) ಈ ರಸ್ತೆಗಳಲ್ಲಿ ಬಿದ್ದ ಗುಂಡಿಗಳನ್ನು ಮುಚ್ಚಲು ಸರ್ಕಾರ ಕೈಗೊಳ್ಳುವ ಕ್ರಮವೇನು? ಹಾಗೂ ಇವುಗಳ ದುರಸ್ಥಿಗಾಗಿ ಎಷ್ಟು ದಿವಸಗಳು ಬೇಕಾಗುತ್ತದೆ?